


ಒಬ್ಬ ವ್ಯಕ್ತಿ ಒಂದು ನದಿಯ ಸಮೀಪದಲ್ಲಿ ನಿಂತು ಏನೋ ಗಹನವಾಗಿ ಯೋಚಿಸುತ್ತಾ, ಅತ್ತ ಇತ್ತ ಓಡಾಡುತ್ತಿದ್ದ. ಆಗ ಅಲ್ಲಿಗೆ ಗಸ್ತು ತಿರುಗುತ್ತಿದ್ದ.

ಪೊಲೀಸ್ ಬಂದು ಅವನಿಗೆ ಎಚ್ಚರಿಸಿದ 'ನೋಡಪ್ಪಾ, ಈ ನದಿಯಲ್ಲಿ ಸ್ನಾನ ಮಾಡಬಾರದು. ಮಾಡಿದರೆ ದಂಡವನ್ನು ವಿಧಿಸಲಾಗುವುದು.'

'ನಾನು ಸ್ನಾನ ಮಾಡೋದಕ್ಕೆ ಬಂದಿಲ್ಲ.'

'ಮತ್ಯಾಕೆ ಬಂದಿದ್ದೀಯ?' ಪೊಲೀಸ್ ರೇಗಿದ.

'ನಾನು ಬಂದಿರೋದು ಮುಳುಗಿ ಸಾಯೋದಕ್ಕೆ.'

'ಹಾಗಾದ್ರೆ ಸರಿ. ನೀನೆಲ್ಲೋ ಸ್ನಾನ ಮಾಡೋದಕ್ಕೆ ಬಂದಿದ್ದೀಯ ಅಂತ ನಾನು ಎಚ್ಚರಿಸಿದೆ, ಅಷ್ಟೆ!' ಎಂದು ಪೊಲೀಸಿನವ ಮುಂದಕ್ಕೆ ಹೋದ.

★★★

ಆಸ್ಪತ್ರೆಗೆ ಬ್ಯಾಂಡೇಜ್ ಹಾಕಿಸಲು ಒಬ್ಬ ಬಂದ.

ಕಾಂಪೌಂಡರ್: ಇಷ್ಟು ಪೆಟ್ಟು ಹೇಗೆ ಬಿತ್ತು?

ಗಾಯಾಳು: ನೋಡಿ, ನಮ್ಮ ಮನೆಯ ಗಲ್ಲಿಯಲ್ಲಿ ಒಂದು ದೊಡ್ಡ ಹೋಟೆಲ್ ಕಮ್ ರೆಸ್ಟೋರೆಂಟ್ ಇದೆ. ಅಲ್ಲಿ ಮೊನ್ನೆಯಿಂದ ಪ್ರಸಿದ್ಧ ನಟಿಯೊಬ್ಬಳು ಉಳಿದುಕೊಂಡಿದ್ದಾಳೆ. ಬೆಳ್ಳಂಬೆಳಿಗ್ಗೆ ಅವಳು ಹೋಟೆಲ್‌ನ ತಾರಸಿಯಲ್ಲಿ ವ್ಯಾಯಾಮ ಮಾಡುತ್ತಿದ್ದಳು. ನಾನು ಏಣಿ ಹಾಕಿ, ಮೇಲೆ ಹತ್ತಿ ಅವಳನ್ನೇ ನೋಡುತ್ತಿರುವಾಗ ಏಣಿ ಜಾರಿ ಕೆಳಗೆ ಬಿತ್ತು. ಅದಕ್ಕೇ ಈ ಪೆಟ್ಟು...

ಕಾಂಪೌಂಡರ್: ಏಣಿ ಗಟ್ಟಿಮುಟ್ಟಾಗಿರಲಿಲ್ವ?

ಗಾಯಾಳು: ನೋಡಿ, ಏಣಿ ಎಷ್ಟೇ ಗಟ್ಟಿಮುಟ್ಟಾಗಿದ್ದರೂ, ಅದರ ಮೇಲೆ ಒಂದೇ ಸಲಕ್ಕೆ ಮೂವತ್ತು ಜನ ಹತ್ತಲು ಪ್ರಯತ್ನಿಸಿದರೆ, ಏಣಿ ಮುರಿಯದೆ ಇರುವುದೇ? ಎಂದ.

★★★

ಅಧಿಕಾರಿಯೊಬ್ಬ ಕಂಠಪೂರ್ತಿ ಕುಡಿದು ತಾನು ಉಳಿದುಕೊಂಡಿದ್ದ ಹೋಟೆಲ್ ರೂಮಿಗೆ ರಾತ್ರಿ ಒಂದು ಗಂಟೆಗೆ ಬಂದ. ಸ್ವಲ್ಪ ಸಮಯದ ನಂತರ ಅವನಿಗೆ ಲಿಂಬೂ ಸೋಡಾ ಕುಡಿಯಬೇಕೆಂದು ಅನ್ನಿಸಿತು. ಅವನು ತಕ್ಷಣ ಆಫೀಸ್‌ಕೌಂಟರ್‌ಗೆ ಫೋನಾಯಿಸಿ, 'ಒಂದು ಸ್ಟ್ರಾಂಗ್ ಲಿಂಬೂ ಸೋಡಾ ಕಳುಹಿಸಿ' ಎಂದು ಆದೇಶಿಸಿದ.

ಸ್ವಲ್ಪ ಸಮಯದ ನಂತರ ರೂಮಿನ ಸೇವಕ ಒಂದು ಲಿಂಬೂ ಸೋಡಾ ತಂದಿಟ್ಟ. ಕಡೆಗೆ ಸೇವಕ ಬಿಲ್‌ಗೆ ಅಧಿಕಾರಿಯಿಂದ ಸಹಿಯನ್ನು ಪಡೆದು, ಅದರ ಒಂದು ಪ್ರತಿಯನ್ನು ರೂಮಿನ ಟೇಬಲ್ ಮೇಲಿಟ್ಟು ಹೊರಟು ಹೋದ. ಲಿಂಬೂ ಸೋಡಾ ಕುಡಿದ ನಂತರ ಅಧಿಕಾರಿಯ ದೃಷ್ಟಿ ಬಿಲ್ ಮೇಲೆ ಬಿತ್ತು. ಅವನು ತಕ್ಷಣ ಕೌಂಟರ್‌ಗೆ ಫೋನಾಯಿಸಿದ, 'ಏನ್ರೀ, ನಮ್ಮಂಥ ಅಧಿಕಾರಿಗಳನ್ನು ನೀವು ಲೂಟಿ ಮಾಡ್ತೀರ? ಒಂದು ಗ್ಲಾಸ್ ಲಿಂಬೂ ಸೋಡಾಕ್ಕೆ 783 ರೂಪಾಯಿಯೇ?'

'ಸಾರ್, ಈ ಬಗ್ಗೆ ನಾನೀಗ್ಲೇ ಚೆಕ್ ಮಾಡ್ತೀನಿ,' ಎಂದು ಕೌಂಟರ್‌ನಲ್ಲಿ ಕೂತಿದ್ದ ವ್ಯಕ್ತಿ ಹೇಳಿದ.

ಸ್ವಲ್ಪ ಹೊತ್ತಾದ ನಂತರ ಕೌಂಟರಿನಿಂದ ಅಧಿಕಾರಿಯ ರೂಮಿಗೆ ಫೋನ್ ಬಂತು.

'ಸಾರ್, ನಾನು ಚೆಕ್ ಮಾಡಿದೆ. ನಮ್ಮ ಲಿಂಬೂ ಸೋಡಾಕ್ಕೆ 60 ರೂಪಾಯಿ ಮಾತ್ರ ಹಾಕಿದ್ದೇವೆ. 783 ಅನ್ನೋದು ನಿಮ್ಮ ರೂಮಿನ ನಂಬರ್!'

★★★

ವೈದ್ಯರು: ಈ ಮೂರು ಟೆಸ್ಟ್‌ಗಳನ್ನು ಮಾಡಿಸಿಕೊಂಡು ಬನ್ನಿ, ರಿಪೋರ್ಟ್ ನೋಡಿ ನಂತರ ಚಿಕಿತ್ಸೆ ಪ್ರಾರಂಭಿಸೋಣ.

ರೋಗಿ: ನಿಜ ಹೇಳಿ ಡಾಕ್ಟರ್, ಇನ್ನು ನಾನೆಷ್ಟು ವರ್ಷ ಬದುಕಬಹುದು?

ವೈದ್ಯರು: ಈ ಪ್ರಶ್ನೆ ಯಾಕೆ?

ರೋಗಿ: ಯಾಕೆಂದರೆ, ನಾನು ಹೆಚ್ಚು ದಿನ ಬದುಕದಿದ್ದರೆ, ಐದಾರು ವರ್ಷ ಬರುವ ಟಿ.ವಿ. ಸೀರಿಯಲ್‌ಗಳನ್ನು ನೋಡಲು ಬಯಸುವುದಿಲ್ಲ!

★★★

ರಾತ್ರಿಯ ಒಂದು ಗಂಟೆಯಾಗಿತ್ತು. ಮಗು ಇದ್ದಕ್ಕಿದ್ದಂತೆ ಗಟ್ಟಿಯಾಗಿ ರೋದಿಸಿತು. ಗಂಡ ರೇಗಿ ಹೆಂಡತಿಗೆ ಹೇಳಿದ, 'ನೀನು ಮಗುವನ್ನು ಬೇರೆ ರೂಮಿಗೆ ಎತ್ತಿಕೊಂಡು ಹೋಗಿ ಸಮಾಧಾನ ಮಾಡು.'

'ನೀವ್ಯಾಕೆ ಸಮಾಧಾನ ಮಾಡಬಾರದು? ಮಗು ಎಷ್ಟಾದರು ಅರ್ಧ ನಿಮ್ಮದು, ಅರ್ಧ ನನ್ನದು ತಾನೇ?' ಹೆಂಡತಿಯೂ ರೇಗಿದಳು.

'ನಿನ್ನ ಮಾತು ನಿಜ. ಆದರೆ ನನ್ನ ಪಾಲಿನ ಅರ್ಧ ಭಾಗ ಸುಮ್ಮನಿದೆ!' ಗಂಡ ಪಿಸುಗುಟ್ಟಿದ.

★★★

ಒಬ್ಬ ಯುವಕ ಕಿಡಕಿಯ ಸಮೀಪದಲ್ಲಿ ಏಣಿ ಹಾಕಿ ತನ್ನ ಗರ್ಲ್ ಫ್ರೆಂಡನ್ನು ಇಳಿಸಿಕೊಂಡು ಅಲ್ಲಿಯೇ ನಿಂತಿದ್ದ ಟ್ಯಾಕ್ಸಿಯಲ್ಲಿ ಕೂರಿಸಿಕೊಂಡು ಓಟಕಿತ್ತ. ಮಾರ್ಗದ ಮಧ್ಯದಲ್ಲಿ ಯುವಕ ಡ್ರೈವರನನ್ನು ಕೇಳಿದ

'ಏನಪ್ಪಾ, ಇಲ್ಲಿಂದ ತಿರುಪತಿಗೆ ಹೋಗಲು ಟ್ಯಾಕ್ಸಿ ಬಾಡಿಗೆ ಎಷ್ಟಾಗುತ್ತೆ?'

'ನೀನೇನೂ ಚಿಂತಿಸ ಬೇಡಪ್ಪ. ಹುಡುಗಿ ಅಪ್ಪನೇ ನನ್ನನ್ನು ಕಿಟಕಿಯ ಸಮೀಪದಲ್ಲಿ ನಿಲ್ಲಿಸಿದ್ದ. ಅವರೇ ನನಗೆ ಟ್ಯಾಕ್ಸಿ ಬಾಡಿಗೆಯನ್ನೂ ಕೊಡುತ್ತಾರೆ. ನಿಮ್ಮಿಬ್ಬರನ್ನು ನಿಶ್ಚಿಂತೆಯಿಂದ ತಿರುಪತಿಗೆ ಬಿಡ್ತೀನಿ!' ಎಂದ ಡ್ರೈವರ್ ಟ್ಯಾಕ್ಸಿಯನ್ನು ತಿರುಪತಿ ದಿಕ್ಕಿಗೆ ಓಡಿಸಿದ.

★★★

ಜ್ಯೋತಿಷಿ: ನಿಮ್ಮ ವಿವಾಹ ನಿಮ್ಮ ಕನಸಿನ ರಾಜಕುಮಾರನಂತಿರುವ ಸುಂದರ ಮತ್ತು ಶ್ರೀಮಂತ ಯುವಕನೊಂದಿಗೆ ಸದ್ಯದಲ್ಲಿಯೇ ನೆರವೇರುವುದು.

ಯುವತಿ: ಹಾಗಾದರೆ ನಾನೀಗ ನನ್ನ ಈಗಿನ ಗಂಡನಿಂದ ಬಿಡುಗಡೆ ಪಡೆಯುವುದು ಹೇಗೆ? ದಯವಿಟ್ಟು ತಿಳಿಸಿ!

■ (ಹಿಂದಿಯಿಂದ) ಡಿ.ಎನ್.ಶ್ರೀನಾಥ್


